ಕಲಬುರಗಿ

ದಿನಾಂಕ 03.07.2021

# ಪತ್ರಿಕಾ ಪ್ರಕಟಣೆ

## ಕಲಬುರಗಿ ನಗರದಲ್ಲಿ ಮನೆಗಳ ಕೀಲಿ ಮುರಿದು ಕಳ್ಳತನ ಮಾಡಿದ 7 ಜನ ಆರೋಪಿತರ ಬಂಧನ

ಪೊಲೀಸ ಆಯುಕ್ತರು ಕಲಬುರಗಿ ನಗರದ , ಉಪ ಪೊಲೀಸ್ ಆಯುಕ್ತರು (ಕಾ&ಸು) &(ಅ&ಸಂ) ಕಲಬುರಗಿ ನಗರ,ಸಾಯಕ ಪೊಲೀಸ ಯುಕ್ತರು(ಬಿ) ಉಪವಿಭಾಗ ಕಲಬುರಗಿ ನಗರ ರವರ ಮಾರ್ಗದರ್ಶನದಂತೆ ಶ್ರೀ ಎಸ್.ಆರ್. ನಾಯಕ ಪೊಲೀಸ್ ಇನ್ಸಪೆಕ್ಟರ ಪೊಲೀಸ ಠಾಣೆ ಕಲಬುರಗಿ ನಗರ ರವರ ನೆತೃತ್ವದಲ್ಲಿ ಬಸವರಾಜು ಪಿ.ಎಸ್.ಐ ಹಾಗೂ ಸಿಬ್ಬಂದಿ ಜನರಾದ ಹುಸೇನಭಾಷಾ ಎ .ಎಸ್. ಐ ಸಿದ್ರಾಮಯ್ಯ ,ಕೇಸುರಾಯ , ಉಮೇಶ, ಆಶೋಕ, ರಾಜಕುಮಾರ ,ಸೈಯದ ತೌಸುಫ್ಹುಸೇನ ರವರು ದಿನಾಂಕ 03.07.2020 ರಂದು ಬೆಳಿಗ್ಗೆ 08.00 ಗಂಟೆ ಸುಮಾರಿಗೆ ಸುಲ್ತಾನಪೂರ ರಿಂಗರೋಡ ಹತ್ತಿರ ಈ ಕೆಳಗಿನ ಕಳ್ಳರಾದ

1) ರಘು @ ರಘಲ್ಯಾ ತಂದೆ ಸೋಪ್ಯಾ ಚೌವ್ಹಾಣ ವ: 19 ವರ್ಷ ಉ: ಕಾಟ ಮುಗ್ಗಾ ಮಾರುವದು ಸಾ:ನೀರಿಟಾಕಿ ಹತ್ತಿರ ಸಾವಳಗಿ .
2) ಶಿವ್ಯಾ @ ಶಿಲವಂತಕಾಳೆ ತಂದೆ ಅಂಜಿರ ಕಾಳೆ ವ: 19 ವರ್ಷ ಉ: ಕೂಲಿ ಕೆಲಸ ಜಾ: ಪಾರ್ದಿ ಸಾ ; ನೀರಿನ ಟಾಕಿ ಹತ್ತಿರ ಸಾವಳಗಿ.
3) ರತ್ನೆ @ ರತ್ನು ತಂದೆ ಸೋಪ್ಯಾ ಪವ್ಹಾರ ವ: 21 ವರ್ಷ ಉ: ಕೂಲಿ ಕೆಲಸ ಜಾ: ಪಾರ್ದಿ ಸಾ : ನೀರಿನ ಟಾಕಿ ಹತ್ತಿರ ಸಾವಳಗಿ
4) ಲಾಲು ತಂದೆ ಅಂಜೀರ ಕಾಳೆ ವ: 24 ವರ್ಷ ಉ: ಕೂಲಿ ಕೆಲಸ ಜಾ : ಪಾರ್ದಿ ಸಾ : ನೀರಿನ ಟಾಕಿ ಹತ್ತಿರ ಸಾವಳಗಿ
5) ಗಣೇಶ ತಂದೆ ಮೋಹನ ಕಾಳೆ ವ: 19 ವರ್ಷ ಉ: ಕೂಲಿ ಕೆಲಸ ಜಾ: ಪಾರ್ದಿ ಸಾ: ನೀರಿನ ಟಾಕಿ ಹತ್ತಿರ ಸಾವಳಗಿ
6) ಶ್ರಾವಣ ತಂದೆ ರಾಮದಾಸ ಶಿಕಾರಿ ವ: 24 ವರ್ಷ ಉ: ಕೂಲಿ ಕೆಲಸ ಜಾ: ಶಿಕಾರಿ ಪಾರ್ದಿ ಸಾ: ಶ್ರೀಶೈಲಗೆ ಹೋಗು ಮೇನ ರೋಡ ಕೋರ್ಟ ಹತ್ತಿರ ನಂದಿಕೊಟ್ಕೂರ ಜಿಲ್ಲಾ: ಕರ್ನೂಲ ರಾಜ್ಯ: ಆಂದ್ರಾಪ್ರದೇಶ .
7) ಕಲಾವತಿ ಗಂಡ ಗೌನ್ಯಾ ವ: 52 ಜಾ: ಪಾರ್ದಿ ಉ: ಕೂಲಿ ಕೆಲಸ ಸಾ : ಪೊಲೀಸ ಕ್ವಾಟರ್ಸ ಹತ್ತಿರ ಸುಲ್ತಾನ ಪೂರ ಕಲಬುರಗಿ

ಇವರನ್ನು ಹೀಡಿದು ಅವರ ಕಡೆಯಿಂದ ಕಲಬುರಗಿಯ ಸವರ್ಣನಗರದ ಶ್ರೀಶಾಮರಾವ ಮಹೇಂದ್ರಕರ್ ರವರ ಮತ್ತು ಜೆ.ಡಿ.ಎ ಕಾಲೋನಿ ಶ್ರೀಮತಿ ಅಂಬುಜಾ ಅವದೂತ ರವರ ಮನೆಯಗಳಲ್ಲಿ ಕಳುವಾದ 8 ಲಕ್ಷ ಮೌಲ್ಯದ ಒಟ್ಟು 163 ಗ್ರಾಂ ಬಂಗಾರ ಆಭರಣಗಳನ್ನು ಮತ್ತು ಕೃತ್ಯಕ್ಕೆ ಬಳಕೆ ಮಾಡಿದ ಎರದು ಪಲ್ಸರ್ ಮೋಟಾರ ಸೈಕಲ ಕಿಮ್ಮತ್ತು 1.00000/- ಹಾಗು ಒಂದು ಇನ್ನವಾ ಮತ್ತು ಫೋರ್ಡಕಾರ ಕಿಮ್ಮತ್ತು 6.00000/- ಹೀಗೆ ಒಟ್ಟು 15.00000/- ರೂ ಕಿಮ್ಮತ್ತಿನ ಮಾಲು ಗಳನ್ನು ವಶಪಡಿಸಿ ಕೊಂಡಿರುತ್ತಾರೆ.ಇದರಲ್ಲಿ ಆರೋಪಿತ ಹೆಣ್ಣುಮಗಳು ಪುಗ್ಗ(ಬಲೂನ) ಮಾರುವ ನೇಪದಲ್ಲಿ ಕೀಲಿ ಹಾಕಿದ ಮನೆಯನ್ನು ಹುಡಕುತ್ತಿದ್ದಳ್ಳು ನಂತರ ಎಲ್ಲರು ಸೇರಿ ಆ ಮನೆಯನ್ನುಕಳವು ಮಾಡುತ್ತಿದ್ದರು ಅಂತಾ ತಿಳಿದು ಬಂದಿದೆ, ಕಳ್ಳರನ್ನು ಹಿಡಿಯುವಲ್ಲಿ ಯಶಸ್ವಿಯಾದ ಚೌಕ ಪೊಲೀಸ ಠಾಣೆಯ ಸಿಬ್ಬಂದಿ ಹಾಗು ಅಧಿಕಾರಿಗಳನ್ನು ಪೊಲೀಸ ಆಯುಕ್ತರು ಕಲಬುರ್ಗಿ ರವರು ಶ್ಲಾಘಿಸಿದ್ದಾರೆ.

Scanned with CamScanner